# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ : 873
2. ಸದಸ್ಯರ ಹೆಸರು : ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು)
3. ಉತ್ತರಿಸುವ ದಿನಾಂಕ : 13.03.2025
4. ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸಂವಿಧಾನ ಆರ್ಟಿಕಲ್-371ಜೆ ತಿದ್ದುಪಡಿ ಅಧಿನಿಯಮ ಜಾರಿಯಿಂದ ಕಲ್ಯಾಣ ಕರ್ನಾಟಕ ಪ್ರದೇಶದ ಪೊಲೀಸ್ ಇಲಾಖೆಯ ನೌಕರರಿಗೆ ಮುಂಬಡ್ತಿಯಲ್ಲಿ ಒಂದೊಂದು ಘಟಕಗಳು ಒಂದೊಂದು ರೀತಿಯಾಗಿ ಮೀಸಲಾತಿ ಕಲ್ಪಿಸಿ ಮುಂಬಡ್ತಿಯಲ್ಲಿ ಪರಸ್ಥಳಿಯರಂತೆ ಸ್ಥಳೀಯ ವೃಂದದ ನೌಕರರಿಗೆ ಸಾಮಾನ್ಯ ಮುಂಬಡ್ತಿಗಳು ದೊರೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಯಾವ ಕ್ರಮಕೈಗೊಳ್ಳಲಾಗಿದೆ; | ಇಲ್ಲ.<br><br>ಪೊಲೀಸ್ ಇಲಾಖೆಯಲ್ಲಿ 371(ಜೆ) ಮೀಸಲಾತಿ ನಿಯಮಗಳನ್ವಯ ರಾಜ್ಯ ಮಟ್ಟದ ಸ್ಥಳೀಯ ವೃಂದ (ಶೇ. 8 ರಷ್ಟು) ಮತ್ತು ಪ್ರಾದೇಶಿಕ ಸ್ಥಳೀಯ ವೃಂದ (ಶೇ. 80/75 ರಷ್ಟು) ಹಾಗೂ ರಾಜ್ಯ ವ್ಯಾಪ್ತಿ ಸ್ಥಳೀಯ ವೃಂದಗಳನ್ನು (8%+80/75%) ರಚಿಸಿ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ. |
| ಆ) | ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ವೈರಲೆಸ್ ಘಟಕದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ ಹೆಚ್.ಸಿ ವೈರ್‌ಲೆಸ್ ರವರಿಗೆ ಮುಂಬಡ್ತಿಗಳು ದೊರೆಯದೇ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಯಾವ ಕ್ರಮ ಕೈಗೊಳ್ಳಲಾಗಿದೆ; | ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಎಲ್ಲಾ ಹೆಚ್.ಸಿ ಹುದ್ದೆಗಳು ಮುಂಬಡ್ತಿ ಹುದ್ದೆಗಳಲಾಗಿರುತ್ತವೆ ಹಾಗೂ ಈ ಹುದ್ದೆಗಳಿಗೆ ಜೇಷ್ಠತೆ, ಅರ್ಹತೆ & ರಿಕ್ತಸ್ಥಾನ ಲಭ್ಯತೆ ಆಧಾರದ ಮೇಲೆ ಮುಂಬಡ್ತಿ ನೀಡಲಾಗುತ್ತಿದೆ.<br><br>ಅದೇ ರೀತಿ ವೈರಲೆಸ್ ಘಟಕದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ ಹೆಚ್.ಸಿ ವೈರಲೆಸ್ ರವರಿಗೆ ರಿಕ್ತಸ್ಥಾನ ಲಭ್ಯತೆಯ ಅನುಗುಣವಾಗಿ ಜೇಷ್ಠತೆ ಮತ್ತು ಅರ್ಹತೆ ಆಧಾರದ ಮೇಲೆ ಮುಂಬಡ್ತಿ ನೀಡಲಾಗುತ್ತಿರುತ್ತದೆ. |
| ಇ) | ರಾಜ್ಯದ ಎಲ್ಲಾ ಪೊಲೀಸ್ ಕಮಿಷನರೇಟ್ ಕಂಟ್ರೋಲ್ ರೂಮ್‌ಗಳಿಗೆ 8-10 ಎಎಸ್‌ಐ ವೈರಲೆಸ್ ಹಾಗೂ ಜಿಲ್ಲಾ ಕಂಟ್ರೋಲ್ ರೂಮ್‌ಗಳಲ್ಲಿ 10-12 ಎಎಸ್‌ಐ ವೈರ್‌ಲೆಸ್ ಹುದ್ದೆಗಳು ಮಂಜೂರಾತಿ ಇದ್ದು, ಆದರೆ ಕಲ್ಯಾಣ ಕರ್ನಾಟಕ ಪ್ರದೇಶದ ಕಲಬುರಗಿ ನಗರ ಕಂಟ್ರೋಲ್ ರೂಮಿಗೆ ಕೇವಲ 4 ಎಎಸ್‌ಐ ಹಾಗೂ ಯಾದಗಿರಿ, ವಿಜಯನಗರ ಜಿಲ್ಲಾ ಕಂಟ್ರೋಲ್ ರೂಮಿಗೆ ಕೇವಲ 6 ಎಎಸ್‌ಐ ವೈರ್‌ಲೆಸ್ ಕಡಿಮೆ ಹುದ್ದೆಗಳಿರುವುದು ಎಲ್ಲಾ ಕಂಟ್ರೋಲ್ ರೂಮ್‌ಗಳಂತೆ ಎಎಸ್‌ಐ ವೈರ್‌ಲೆಸ್ ಹುದ್ದೆಗಳು ಹೆಚ್ಚಿಸಲು ಸರ್ಕಾರ ಏನಾದರು ಕ್ರಮಕೈಗೊಂಡಿದಿಯೇ; | ನಿಯಂತ್ರಣ ಕೊಠಡಿಯ ವ್ಯಾಪ್ತಿಗನುಣವಾಗಿ ಪ್ರಸ್ತಾಪಿತ ಕಲ್ಯಾಣ ಕರ್ನಾಟಕ ಪ್ರದೇಶದ ಜಿಲ್ಲೆ ಮತ್ತು ಕಮಿಷನರೇಟ್‌ಗಳಿಗೆ ಈ ಕೆಳಗಿನಂತೆ ಎಎಸ್‌ಐ ಹುದ್ದೆಗಳು ಮಂಜೂರಾಗಿರುತ್ತವೆ:-<br><br>ಕ್ರ.ಸಂ \| ಘಟಕ \| ಮಂಜೂರಾತಿ<br>1 \| ಕಲಬುರಗಿ ಜಿಲ್ಲೆ \| 9<br>2 \| ಕಲಬುರಗಿ ನಗರ \| 4<br>3 \| ಬಳ್ಳಾರಿ \| 8<br>4 \| ವಿಜಯನಗರ \| 6<br>5 \| ಯಾದಗಿರಿ \| 6<br>ಒಟ್ಟು \| 33<br><br>ಪ್ರಸ್ತುತ ಈ ಹುದ್ದೆಗಳನ್ನು ಹೆಚ್ಚಿಸಲು ಯಾವುದೇ ಪ್ರಸ್ತಾವನೆಗಳಿರುವುದಿಲ್ಲ. |

| | | |
|---|---|---|
| ಈ) | ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ವೈರಲೆಸ್ ಘಟಕದಲ್ಲಿ ಪ್ರಸ್ತುತ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಹಾಗೂ ಕಲ್ಯಾಣ ಕರ್ನಾಟಕೇತರ ವೃಂದದಲ್ಲಿ ಎಷ್ಟು ಎಎಸ್‌ಐ ವೈರಲೆಸ್ ಹುದ್ದೆಗಳು ಖಾಲಿ ಇವೆ; ಎರಡು ವೃಂದದಲ್ಲಿ ಎಷ್ಟು ಹೆಚ್.ಸಿ ವೈರ್‌ಲೆಸ್‌ರವರುಗಳು ಮುಂಬಡ್ತಿಗೆ ಅರ್ಹರಿದ್ದಾರೆ? | ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ವೈರ್‌ಲೆಸ್ ಘಟಕದಲ್ಲಿ ಪ್ರಸ್ತುತ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ - 03 ಹಾಗೂ ಕಲ್ಯಾಣ ಕರ್ನಾಟಕೇತರ ವೃಂದದಲ್ಲಿ - 21 ಎ.ಎಸ್.ಐ ಹುದ್ದೆಗಳು ಖಾಲಿಯಿವೆ. ಆದರೆ, ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ - 21 ಹಾಗೂ ಕಲ್ಯಾಣ ಕರ್ನಾಟಕೇತರ ವೃಂದದಲ್ಲಿ - 03 ಹೆಚ್‌ಸಿ ವೈರಲೆಸ್ ರವರುಗಳು ಮುಂಬಡ್ತಿಗೆ ಅರ್ಹರಿದ್ದಾರೆ.<br><br>ವೈರಲೆಸ್ ಘಟಕದಲ್ಲಿನ 24 ಎಎಸ್‌ಐ(ವೈ) ರವರನ್ನು ಕೆಸಿಎಸ್ ನಿಯಮ 32 ರಡಿ ಪಿಎಸ್‌ಐ(ವೈ) ನೇರ ನೇಮಕಾತಿ ಹುದ್ದೆಗಳ ಎದುರಾಗಿ ತಾತ್ಕಾಲಿಕವಾಗಿ ಸ್ವತಂತ್ರ ಪ್ರಭಾರದಲ್ಲಿರಿಸಿದ್ದು, ಈ ಸ್ವತಂತ್ರ ಪ್ರಭಾರದಲ್ಲಿ ಆದೇಶವನ್ನು ಯಾವುದೇ ಸಂದರ್ಭದಲ್ಲಿ ಹಿಂದಕ್ಕೆ ಪಡೆಯಲು ಅಸ್ಪದವಿರುತ್ತದೆ. ಎಎಸ್‌ಐ ಹುದ್ದೆಗಳನ್ನು ಭರ್ತಿ ಮಾಡಿರುವುದಿಲ್ಲ. |

**ಹೆಚ್‌ಡಿ 66 ಪಿಪಿಎಸ್ 2025**

**(ಡಾ: ಜಿ.ಪರಮೇಶ್ವರ)**
ಗೃಹ ಸಚಿವರು